**CCE RF**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2015**

**S. S. L. C. EXAMINATION, MARCH / APRIL, 2015**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 30. 03. 2015 ] ಸಂಕೇತ ಸಂಖ್ಯೆ : **01-K**

Date : 30. 03. 2015 ] CODE NO. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಶಾಲಾ ಅಭ್ಯರ್ಥಿ / Regular Fresh )**

[ ಪರಮಾವಧಿ ಅಂಕಗಳು : 100

[ Maximum Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | $11 \times 1 = 11$ |
| 1. | ಮತಂಗಾಶ್ರಮದಲ್ಲಿದ್ದ ತಪಸ್ವಿನಿ ಶಬರಿ | |
| 2. | ಬುಕ್ಕರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ 'ರಾಜದ್ರೋಹಿ' ಎನಿಸುವನು. | |
| 3. | ಮನೆಮಂಚಮ್ಮನ ಕತೆ ಹೇಳಿದ ಕವಿ 'ಸಿದ್ಧಲಿಂಗಯ್ಯ'. | |
| 4. | ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ 'ಹೊನ್ನಿನ ಕಳ್ಳತನದ' ಆರೋಪವನ್ನು ಹೊರಿಸಿದನು. | |
| 5. | ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ | |
| 6. | ಕಾಲಪಕ್ಷಿಯ ಕಣ್ಣುಗಳು 'ಸೂರ್ಯ ಮತ್ತು ಚಂದ್ರ' | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ಕುದುರೆಯನ್ನು ಲವನು 'ಉತ್ತರೀಯದಿಂದ' ಕಟ್ಟಿದನು. | |
| 8. | ಮಾನವನ ಕಾದಾಟಕ್ಕೆ ಕಾರಣ 'ಹಮ್ಮು' | |
| 9. | ಭರತ ಚಕ್ರವರ್ತಿಯು ತನ್ನ ಗೆಲುವಿನ ಶಾಸನವನ್ನು 'ವೃಷಭಾಚಲ'ದಲ್ಲಿ ಬರೆಸಲು ಹೋಗುತ್ತಾನೆ. | |
| 10. | ಅಂದವಾದ ಬರವಣಿಗೆಯ 'ಶಿಕ್ಷಣದ ಅವಶ್ಯಕ ಅಂಶ' ಎಂಬುದು ಗಾಂಧಿಯವರ ಅಭಿಪ್ರಾಯ. | |
| 11. | ಮುದ್ದು ಪಾರಿವಾಳಗಳ ಜೋಡಿಯು 'ದಟ್ಟ ಕಾಡಿನಲ್ಲಿದ್ದ ಒಂದು ಮರದ ಪೊಟರೆಯಲ್ಲಿ' ಸಂಸಾರ ಹೂಡಿತ್ತು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $9 \times 2 = 18$ |
| 12. | ಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಶಾಸನವನ್ನು ಹೊರಡಿಸಿ ವೈಷ್ಣವರು ಭೇದಭಾವ ಮಾಡದೆ ಜೈನ ಬಸದಿಗಳ ರಕ್ಷಣೆಗಾಗಿ ಮನೆಗಂದಾಯವನ್ನು ಪ್ರತಿ ವರ್ಷಕ್ಕೆ ಒಂದು ನಾಣ್ಯದಂತೆ ಸಂಗ್ರಹಿಸಿ ಕಾವಲನ್ನು ಗೊತ್ತು ಮಾಡಬೇಕು. ಇಪ್ಪತ್ತು ಆಳುಗಳಿಗೆ ಈ ಹಣದಲ್ಲಿ ಸಂಭಾವನೆ ಕೊಟ್ಟು ಉಳಿದಿರುವ ಹಣದಲ್ಲಿ ಬಸದಿಗಳಿಗೆ ಸುಣ್ಣಬಣ್ಣ ಮಾಡಿ ಜೀರ್ಣೋದ್ಧಾರ ಮಾಡುವುದು. ಇದು ಶಾಶ್ವತವಾಗಿ ಪಾಲನೆಯಾಗಬೇಕು. | |
| 13. | "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ನೆಹರೂ ಅವರು ವಿಶ್ವೇಶ್ವರಯ್ಯನವರ ಬಗ್ಗೆ ಹೇಳಿದ್ದಾರೆ. | |
| 14. | "ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು." | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 15. | ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸರು. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಹೋದವರು ಪರಮಹಂಸರು. | |
| 16. | ಕುರುಕುಳವೆಂಬ ನಂದನವನವನ್ನು ಭೀಮನೆಂಬ ಮದ ಬಂದು ಸೊಕ್ಕೇರಿದ ಆನೆಯು ಕೋಪಿಸಿಕೊಂಡು ನುಗ್ಗಿ ನೆಲಸಮ ಮಾಡಿದಾಗ ಒಂದು ದೊಡ್ಡ ಮರವೊಂದೇ ಉಳಿಯುವಂತೆ ನೀನು ಉಳಿದಿರುವೆ. ಯುದ್ಧ ಮಾಡಲು ಇನ್ನು ನಿನ್ನೊಂದಿಗೆ ಯಾರೂ ಇಲ್ಲ. ಮುದುಕರೂ, ಕುರುಡರೂ ಆದವರೆಂದು ನಮ್ಮನ್ನು ಅಲಕ್ಷಿಸದೆ ತಂದೆಯ ಮಾತಿಗೆ ಒಪ್ಪಿಕೊಳ್ಳು ಮಗನೆ ಎಂದು ಗಾಂಧಾರಿ ಹೇಳುತ್ತಾಳೆ. | |
| 17. | ನನಗೂ ಪಾಂಡುವಿಗೂ ಭೇದವಿಲ್ಲ. ರಾಜ್ಯವನ್ನು ಹಂಚಿಕೊಂಡು ಆಳೋಣ. ಪಾಂಡವರೂ ಇದಕ್ಕೆ ಒಪ್ಪುತ್ತಾರೆ. ಈ ಮಹಾಯುದ್ಧವು ನಿನ್ನಿಂದಾಯಿತೆಂದರೆ ಕೋಪಿಸಿಕೊಳ್ಳುತ್ತೀಯೆ, ಭೀಷ್ಮನಿಗೆ, ದ್ರೋಣನಿಗೆ ಕರ್ಣಂಗೆ ಅಸಾಧ್ಯವಾದ ಭೀಮನನ್ನು ಎದುರಿಸಿ ನಿಲ್ಲುವವರು ಯಾರಿದ್ದಾರೆ. ಸಂಧಿಯೇ ಉಚಿತವಾದುದು ಎಂದು ಧೃತರಾಷ್ಟ್ರ ಹೇಳುತ್ತಾನೆ. | |
| 18. | ಈ ಭೂಮಿಗೆ ನಾನೇ ಯಜಮಾನ ಎಂಬ ತಿಳಿವಿನಲ್ಲಿ ಮಾನವ ಗಡಿಯನ್ನು ಗೊತ್ತು ಮಾಡಿಕೊಂಡನು. ಅಹಂಕಾರದಿಂದ ಗಡಿಯ ರಕ್ಷಣೆಗೆ ಕಾದಾಡತೊಡಗಿದನು. ಕಾದಾಟದಲ್ಲಿ ಗಡಿಯ ಎರಡೂ ಕಡೆಯವರು ಶವವಾದರು. | |
| 19. | ವಿಜ್ಞಾನಿಗಳು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ನಿಜ ಜೀವನದಲ್ಲಿ ಅವರ ಯೋಚನಾಶಕ್ತಿ ಅವೈಜ್ಞಾನಿಕವಾಗಿ ಇರುತ್ತದೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ. | |
| 20. | "ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ, ಮೈಯೊಳಗೆ ನವಗಾಯ ಒಂಬತ್ತು ತುಂಡ, ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ ರಾಯರಾಯರಿಗೆಲ ತಾನೆ ಪ್ರಚಂಡ." | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 4 × 3 = 12 |
| | ಆಯ್ಕೆ : ಕರ್ತೃ–ಆಕರ–ಪಠ್ಯ | 1 ಅಂಕ |
| | ಸಂದರ್ಭ : ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಸ್ವಾರಸ್ಯ : ಅಂತರಾರ್ಥ, ಭಾಷೆ, ಪದಬಂಧ | 1 ಅಂಕ |
| | ಒಟ್ಟು | 3 ಅಂಕಗಳು |
| 21. | "ಬೆಳಕಿಗೊಲಿದವರ್ ಉರಿವ ಬತಿಯ ಕರುಕ ಕಾಣರು."<br>*ಆಯ್ಕೆ :* ಈ ವಾಕ್ಯವನ್ನು ಪು.ತಿ. ನರಸಿಂಹಾಚಾರ್ಯರವರ 'ಶಬರಿ' ಗೀತನಾಟಕ ಸಂಪಾದಿತ ಕೃತಿ 'ಏಕಾಂಕನಾಟಕಗಳು' ಕೃತಿಯಿಂದ ಆಯ್ದುಕೊಂಡ 'ಶಬರಿ' ಪಾಠದಿಂದ ಆರಿಸಿಕೊಂಡಿದೆ.<br>*ಸಂದರ್ಭ :* ಶ್ರೀರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿ ಮುಕ್ತಿಯನ್ನು ಹೊಂದಲು ಅಗ್ನಿಪ್ರವೇಶ ಮಾಡಿದಾಗ ರಾಮನು ಲಕ್ಷ್ಮಣನಿಗೆ ಹೇಳಿದ ಮಾತಾಗಿದೆ.<br>*ಸ್ವಾರಸ್ಯ :* ಬಾಳಿನಲ್ಲಿ ದೈವಾಂಶವನ್ನು ಪಡೆದುಕೊಂಡವರು ಜೀವನ ಪಥದ ಕಹಿಗಿಂತ ಸಾಧಿಸಿದ ಗುರಿಯನ್ನೇ ಮುಖ್ಯವಾಗಿಸುತ್ತಾರೆ ಎಂಬುದು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ರೂಪುಗೊಂಡಿದೆ. | |
| 22. | "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"<br>*ಆಯ್ಕೆ :* ಈ ವಾಕ್ಯವನ್ನು ದುರ್ಗಸಿಂಹ ಕವಿಯ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯ ಪಾಠದಿಂದ ಆರಿಸಿಕೊಂಡಿದೆ.<br>*ಸಂದರ್ಭ :* ಹೊನ್ನಿನ ಕಳ್ಳತನದ ವಿಚಾರಣೆಯ ಸಂದರ್ಭದಲ್ಲಿ ಸಾಕ್ಷಿಯಾಗಿ ವೃಕ್ಷದ ಬಳಿ ಕೇಳಲಾಗಿ, ದುಷ್ಟಬುದಿಯ ತಂದೆಯಾದ ಪ್ರೇಮಮತಿಯು ಮತಿಗೆಟ್ಟು ಆಡಿದ ಮಾತು ಎಂತಹುದೆಂಬುದನ್ನು ಆಲಂಕಾರಿಕವಾಗಿ ಕವಿ ಈ ರೀತಿ ಹೇಳಿದ್ದಾನೆ.<br>*ಸ್ವಾರಸ್ಯ :* ಮನೋವಿಕಲ್ಪಿತರು, ಸ್ವಾರ್ಥಿಗಳು ಹೊಂದುವ ಸ್ಥಿಯನ್ನು ಇಲ್ಲಿ ಮನೋಜ್ಞವಾಗಿ ಹೇಳಲಾಗಿದೆ. | |
| 23. | "ಸೌರ್ವಭೌಮರಾ ನೆತ್ತಿಯ ಕುಕ್ಕಿ"<br>*ಆಯ್ಕೆ :* ಈ ವಾಕ್ಯವನ್ನು ದ.ರಾ. ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದಾಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.<br>*ಸಂದರ್ಭ :* ಕಾಲಪಕ್ಷಿ ಕಾಲಗರ್ಭದಲ್ಲಿ ನಮ್ಮ ಭೂಮಿಯನ್ನು ಆಳಿದ ರಾಜ ಮಹಾರಾಜರುಗಳು, ಮೆರೆದ ಚಕ್ರವರ್ತಿಗಳು ಮರೆಯಾದ ಅಂಶವನ್ನು ಈ ರೀತಿಯಲ್ಲಿ ವರ್ಣಿಸಲಾಗಿದೆ.<br>*ಸ್ವಾರಸ್ಯ :* ಕಾಲವನ್ನು ಮೀರಿನಿಂತವರು ಯಾರೂ ಇಲ್ಲ 'ನಾನೆಂಬ ಅಹಂ' ಆಳುವವರಿಗೆ ಉಚಿತವಲ್ಲ ಎಂಬುದು ಧ್ವನಿಪೂರ್ಣವಾಗಿ ಇಲ್ಲಿ ಮೂಡಿ ಬಂದಿದೆ. | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | "ಜೀವ ಸತ್ತು ಹೋಗುವುದು ಗೊತ್ತ." | |
| | *ಆಯ್ಕೆ :* ಈ ಮೇಲಿನ ವಾಕ್ಯವನ್ನು ಡಾ॥ ಬಿ.ಎಸ್. ಗದ್ದಗಿಮಠ ಅವರ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಪದ್ಯದಿಂದ ಆರಿಸಿಕೊಂಡಿದೆ. | |
| | *ಸಂದರ್ಭ :* ಕುಂಪಣಿ ಸರ್ಕಾರ ಹೊರಡಿಸಿದ ನಿಶ್ಶಸ್ತ್ರೀಕರಣದ ಆದೇಶವನ್ನು ಪಾಲಿಸಿದರೆ ವಂಶಪಾರಂಪರ್ಯವಾಗಿ ಬಂದ ಕುಲ ಕಸುಬಾದ ಬೇಟೆಯನ್ನು ಮಾಡಲು ಸಾಧ್ಯವಿಲ್ಲವೆಂದು ಮುಧೋಳದ ಹಲಗಲಿ ಗ್ರಾಮದ ಹನುಮ, ಬಾಲ, ಜಡಗ ಮತ್ತು ರಾಮರು ಭಂಡೇಳುವ ಸಂದರ್ಭದಲ್ಲಿ ಆಡಿದ ಮಾತಾಗಿದೆ. | |
| | *ಸ್ವಾರಸ್ಯ :* ಬದುಕಿಗೆ ಆಧಾರವಾದ ಬೇಟೆಯನ್ನು ಮಾಡದಿದ್ದರೆ ಬದುಕಿದ್ದೂ ಸತ್ತಂತೆ ಎಂಬುದು ಹಲಗಲಿ ಭಂಟರ ಈ ಮಾತಿನಲ್ಲಿ ಬಹು ಸ್ವಾರಸ್ಯವಾಗಿ ಮೂಡಿಬಂದಿದೆ. | |
| | **ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | ಎ.ಎನ್. ಮೂರ್ತಿರಾವ್ :<br>ಕನ್ನಡದ ಪ್ರಸಿದ್ಧ ಪ್ರಬಂಧಕಾರರೆಂದೇ ಗುರುತಿಸಿಕೊಂಡ ಅಕ್ಕಿಹೆಬ್ಬಾಳು ನರಸಿಂಹಮೂರ್ತಿ ರಾವ್ ಅವರು ಕಿ.ಶ. ೧೯೦೦ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಶ್ರೀಯುತರು ಹಗಲುಗನಸುಗಳು, ಅಲೆಯುವಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಚಂಡಮಾರುತ, ಮಿನುಗು–ಮಿಂಚು, ಚಿತ್ರಗಳು–ಪತ್ರಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಪಂಪ ಪ್ರಶಸ್ತಿ, ಗೌರವ ಡಿ.ಲಿಟ್ ಪದವಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೆ ೫೬ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವಗಳು ಸಂಧಿವೆ. | |
| 26. | ಲಕ್ಷ್ಮೀಶ :<br>ಹದಿನಾರನೇ ಶತಮಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಕನ್ನಡ ಕವಿಗಳಲ್ಲಿ ಒಬ್ಬರಾದ ಕವಿ ಲಕ್ಷ್ಮೀಶ ಹುಟ್ಟಿದ್ದು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿನಲ್ಲಿ ಕ್ರಿ.ಶ. ೧೫೫೦ ರಲ್ಲಿ. ಈ ಕವಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಈತನು 'ಜೈಮಿನಿಭಾರತ' ಎಂಬ ಪ್ರಸಿದ್ಧ ಕೃತಿಯನ್ನು ರಚಿಸಿದ್ದಾನೆ. ಲಕ್ಷ್ಮೀಶ ಕವಿಗೆ ಉಪಮಾಲೋಲ, 'ಕರ್ಣಾಟಕ ಚೂತವನ ಚೈತ್ರ' ಎಂಬ ಬಿರುದುಗಳಿವೆ. | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 27. | ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುವ ಮುಟ್ಟೋಣ<br>**ಅಥವಾ**<br>ಮತಗಳೆಲ್ಲವೂ ಪಥಗಳು ಎನ್ನುವ<br>ಹೊಸ ಎಚ್ಚರದೊಳು ಬದುಕೋಣ<br>ಭಯ–ಸಂಶಯದೊಳು ಕಂದಿದ ಕಣ್ಣೋಳು<br>ನಾಳಿನ ಕನಸನು ಬಿತ್ತೋಣ. | |
| | **ಪದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಪ್ರತಿ ಪ್ರಶ್ನೆಯ ಸರಿಯುತ್ತರಕ್ಕೂ 1 ಅಂಕ)** | 4 × 1 = 4 |
| 28. | ಅ) ಮರನೇರಿದ ಮರ್ಕಟನಂತೆ ಎಂಬ ಸಾಲು.<br>(ವಿದ್ಯಾರ್ಥಿಯು ಸಕಾರಣವಾದ ಯಾವುದೇ ಸಾಲನ್ನು ಬರೆಯಬಹುದು)<br>ಆ) ಮಾನವನ ಮನಸ್ಸು ಚಂಚಲತೆಯಿಂದ ಕೂಡಿದ್ದು, ಮರನೇರಿದ ಮರ್ಕಟಕ್ಕೆ ಹೋಲಿಸಿದ್ದು ನೈಜತೆಯಿಂದ ಕೂಡಿದೆ.<br>ಇ) ಮನಸ್ಸು ಚಂಚಲವಾಗಿದ್ದರೆ ಯಾವ ಸಾಧನೆಯನ್ನೂ ಮಾಡಲಾಗದು.<br>ಈ) ಬಸವಣ್ಣನವರು ಕೂಡಲ ಸಂಗಮನಲ್ಲಿ ಭಕ್ತಿಯನ್ನು ಮೆರೆಯಲು ಚಂಚಲ ಮನಸ್ಸು ಅಡ್ಡಿಯಾಗಿದ್ದರಿಂದ ಹೀಗೆ ಪ್ರಶ್ನಿಸಿದ್ದಾರೆ. | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕ |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 29. | ಗೊರೂರು ರಾಮಸ್ವಾಮಿ ಅಯ್ಯಂಗಾರರು ಅಗಲವಾದ ಎಂಟೂವರೆ ಮೊಳ ಉದ್ದದ ದಪ್ಪನೂಲಿನ ಖಾದಿ ಕಚ್ಚೆಪಂಚೆಯನ್ನು ಉಟ್ಟಿದ್ದರು. ಅದಕ್ಕೆ ಅಗಲವಾದ ಕೆಂಪು ಕಂಬಿ, ಕಂಬಿಯ ತುದಿಯಲ್ಲಿ ನಾಲ್ಕು ಜರಿಗೆರೆಗಳು ಇದ್ದು ಜರ್ಬಾಗಿ ಕಾಣುತ್ತಿತ್ತು. ಕೆಂಪು ಉಣ್ಣೆಯ ಶಾಲು ಹೊದ್ದು, ಮಫ್ಲರ್ ಕಟ್ಟಿದ್ದರು. ಹಣೆಯಲ್ಲಿ ಢಾಳಾದ ಕೆಂಪುನಾಮ, ತಲೆಮೇಲೆ ಕೆದರಿ ನಿಂತಿದ್ದ ಬಿಳಿಕೂದಲು, ಬಿಳಿಗಡ್ಡ, ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ ಧರಿಸಿದ್ದ ಅಯ್ಯಂಗಾರರು ಕಾವಿ ಬಣ್ಣದ ನೀಳವಾದ ಜುಬ್ಬವನ್ನು ಧರಿಸಿದ್ದರು. ನೋಡಲು ಮಕ್ಕಳಿಗೆ ಸಾಂತಾಕ್ಲಾಸ್, ಫೈಡ್ ಪೈಪರ್ ಕಂಡಂತೆ ವಿಚಿತ್ರವಾಗಿ ಕಂಡರು. | |
| | **ಅಥವಾ** | |
| | ಗೊರೂರು ರಾಮಸ್ವಾಮಿ ಅಯ್ಯಂಗಾರರು, ವಿದ್ಯುತ್ ಒಲೆಯಿಂದ ಒಂದೇ ಸಮನೆ ಬರುತ್ತಿದ್ದ ಕೊಂಬಿನ ಸದ್ದು ಉಂಟುಮಾಡಿದ ಆತಂಕವನ್ನು ನಿವಾರಿಸಿಕೊಳ್ಳಲು ಮೊದಲು ಹೆಂಡತಿಯ ಮಾತಿನಂತೆ ಮನೆಯ ಅಕ್ಕಪಕ್ಕದ ಮನೆಗಳಲ್ಲಿ ಯಾರಾದರೂ ಸಹಾಯಕ್ಕೆ ಸಿಗಬಹುದೆಂದು ನೋಡಿದರು. ಯಾರೂ ಸಿಗದಿದ್ದಾಗ ರಸ್ತೆಯಲ್ಲಿ ಓಡಾಡುವವರ ಸಹಾಯ ಪಡೆಯಲು ನೋಡಿದರೂ ಪ್ರಯೋಜನವಾಗಲಿಲ್ಲ. ಹತ್ತಿರದಲ್ಲೇ ಇದ್ದ ಶಾಲೆಯಿಂದ ಹುಡುಗರನ್ನೋ, ಶಿಕ್ಷಕರನ್ನೋ ಕರೆದು ತನ್ನಿ ಎಂದು ಹೆಂಡತಿ ಸಲಹೆ ಕೊಟ್ಟಾಗ ಹಾಗೇ ಆಗಲಿ ಎಂದು ಶಾಲೆಯ ಕಡೆ ಹೆಜ್ಜೆ ಹಾಕಿದರು. ಇವರ ವಿಚಿತ್ರ ವೇಷಭೂಷಣ ನೋಡಿ ಮಾತಿಗಿಳಿದ ಹುಡುಗರು–ಶಿಕ್ಷಕರೊಂದಿಗೆ ಭಾರತ–ಗಾಂಧಿ–ಖಾದಿ ಇವುಗಳ ಬಗ್ಗೆ ವಿವರಿಸುತ್ತ ಬಂದ ಕಾರ್ಯವನ್ನೇ ಮರೆತಿದ್ದರು. ಹೆಂಡತಿ ಶಾಲೆಗೆ ಬಂದು ಎಚ್ಚರಿಸಿದಾಗ ಶಾಲಾ ಶಿಕ್ಷಕರಿಗೆ ವಿಷಯ ತಿಳಿಸಿ, ಅವರು ಕಳುಹಿಸಿದ ಹುಡುಗನ ಸಹಾಯದಿಂದ ಅಪಾಯವನ್ನು ಪರಿಹರಿಸಿಕೊಂಡರು. | |
| 30. | ಕೃಷ್ಣನು ಕರ್ಣನಿಗೆ ಜನ್ಮವೃತ್ತಾಂತವನ್ನು ತಿಳಿಸಿ, ನಿನಗೆ ಹಸ್ತಿನಾಪುರದ ರಾಜ ಪದವಿಯನ್ನು ಕೊಡಿಸುತ್ತೇನೆ. ಪಾಂಡವ ಮತ್ತು ಕೌರವ ರಾಜರುಗಳು ನಿನ್ನ ರಾಜ ಪದವಿಯನ್ನು ಒಪ್ಪಿಕೊಳ್ಳುತ್ತಾರೆ. ಈ ಎರಡೂ ವಂಶದವರು ನಿನ್ನ ಸೇವೆಗೆ ಸಿದ್ಧರಿರುವಾಗ ನೀನು ಕೈಯೊಡ್ಡಿ ಕೌರವನೆದುರು ನಿಲ್ಲುವುದೆ ? ಹೇಳು ಎಂದನು. ಅದಲ್ಲದೆ ಒಂದು ಕಡೆ ಕೌರವ ಸೇನೆ, ಇನ್ನೊಂದು ಕಡೆ ಪಾಂಡವರ ಪಡೆ, ಮುಂದೆ ಮಾದ್ರ, ಮಗಧ, ಯಾದವ ರಾಜರುಗಳು ಇರುವ ಓಲಗದಲ್ಲಿ ಸಿಂಹಾಸನವನ್ನು ನೀನು ಅಲಂಕರಿಸು. ಇದನ್ನು ಬಿಟ್ಟು ದುರ್ಯೋಧನ ಹೇಳಿದಂತೆ ಕೇಳುವ ಊಳಿಗತನ ಕಷ್ಟ ಎಂದು ಆಮಿಷವನ್ನು ಒಡ್ಡುತ್ತಾನೆ. | |
| | **ಅಥವಾ** | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪಾಂಡವರು ಸಹೋದರರು ಎಂದು ಕೃಷ್ಣನ ಮಾತಿನಿಂದ ತಿಳಿದಾಗ, ಕರ್ಣನ ಕೊರಳ ಸೆರೆ ಬಿಗಿದು ದುಃಖ ಉಮ್ಮಳಿಸಿ ಬಂದಿತು. ಕಣ್ಣಲ್ಲಿ ಕಂಬನಿ ತುಂಬಿಕೊಂಡಿತು. ಮನದಲ್ಲಿ ಬಹುವಾಗಿ ನೊಂದುಕೊಂಡು ಅಯ್ಯೋ ಕುರುಪತಿಗೆ ಕೇಡಾಯಿತು ಎಂದು ಮನಸ್ಸಿನಲ್ಲೇ ಹೇಳಿಕೊಂಡನು. ಕೃಷ್ಣನ ವೈರತ್ವದ ಹೊಗೆ ಕೇಡುಂಟು ಮಾಡದೆ ಹೋಗುತದೆಯೆ ? ನನ್ನ ವಂಶದ ನಿಜ ಸ್ಥಿತಿಯನ್ನು ಹೇಳಿ ಕೃಷ್ಣ ತನ್ನನ್ನು ಕೊಂದನು ಎಂದುಕೊಳ್ಳುತ್ತ ಏನು ಹೇಳಿ ಪ್ರಯೋಜನ ಏನು ಎಂದು ಚಿಂತೆಗೀಡಾದನು. | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $2 \times 2 = 4$ |
| 31. | ಅ) ಧರ್ಮಗಳು ಹಾಕಿಕೊಟ್ಟ ರತ್ನಪಾಠದಂತೆ ಸಮಾಜವು ಅಂತರ್‌ಜೀವಿಗಾಗಿ ಧರ್ಮಶಾಲೆಗಳನ್ನು, ವಿಹಾರಗಳನ್ನು, ಅನ್ನಛತ್ರಗಳನ್ನು ಏರ್ಪಡಿಸಿದ್ದಲ್ಲದೆ ಮಠ–ದೇವಸ್ಥಾನಗಳಲ್ಲೂ ಆಶ್ರಯ ನೀಡಿದೆ. ಮನೆಯಲ್ಲಿಟ್ಟು ಯೋಗಕ್ಷೇಮ ನೋಡಿಕೊಂಡವರೂ ಉಂಟು. | |
| | ಆ) ಸಾಧಕನ ಕರ್ತವ್ಯದಲ್ಲಿ ಸ್ವಯಂಪೂರ್ಣತೆ ಕಾಣಬೇಕಾದರೆ ಆತ ಯಾರನ್ನೂ ಆಶ್ರಯಿಸದೆ ಬದುಕಬೇಕು. ಇನ್ನೊಬ್ಬರ ಮೇಲೆ ಅವನೆಂದೂ ಭಾರ ಹಾಕಿರಬಾರದು. ತಾನಾಗಿಯೇ ಕೈಯೆತ್ತಿಕೊಡದೆ ಏನ್ನನ್ನೂ ಸ್ವೀಕರಿಸಬಾರದು. ದಾತೃವಿನ ಮನವನ್ನು ಹತ್ತು ಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು. ಆಗ ಮಾತ್ರ ಸ್ವಯಂ ಪೂರ್ಣತೆ ಇರುತ್ತದೆ. | |
| | **ವಿಭಾಗ – 'ಬಿ'** **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $10 \times 1 = 10$ |
| 32. | (ಸಿ) ವೃದ್ಧಿ | |
| 33. | (ಡಿ) ಉದ್ಧರಣ | |
| 34. | (ಬಿ) ಕಂಗೆಡು | |
| 35. | (ಎ) ಸಂಯೋಜಿತ ವಾಕ್ಯ | |
| 36. | (ಬಿ) ವಿದ್ವಾಂಸ | |
| 37. | (ಎ) ಉಂಟು | |
| 38. | (ಡಿ) ಉರ್ದು | |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 39. | (ಎ) ದ್ವಿತೀಯಾ | |
| 40. | (ಸಿ) ತಿನ್ನಳು | |
| 41. | (ಎ) ಯತಿ | |
| | ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) : | $4 \times 1 = 4$ |
| 42. | ಅಮರ್ದು | |
| 43. | ಹೊಂದಿಕೊಂಡರೆ | |
| 44. | ದ್ವಿರುಕ್ತಿ | |
| 45. | ತದ್ಧಿತಾಂತಾವ್ಯಯ | |
| 46. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U — U | — U U | U — U | U — U | U — U | — U — |
| ಕ ರು ಕು | ಳ ನಂ ದ | ನಂ ಪ ವ | ನ ನಂ ದ | ನ ನೆಂ ಬ | ಮ ದಾಂ ಧ | ಗಂ ಧ ಸಿಂ |

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾ ವೃತ್ತದ ಲಕ್ಷ್ಯವಾಗಿದೆ.

***ಅಥವಾ***

| ಸ | ಭ | ರ | ನ | ಮ | ಯ | ಲ.ಗು |
|---|---|---|---|---|---|---|
| U U U | — U U | — U — | U U U | — — — | U — — | U — |
| ಎ ನ ಗಂ | ಪಾಂ ಡು ಗ | ಮಿ ಲ್ಲ ಭೇ | ದ ಮಿ ಳೆ | ಯಂ ಪ ಚ್ಛಾ | ಳ್ವ ಮಾ ಪಾಂ | ಡು ನಂ |

ಇದು ಅಕ್ಷರ ಗಣ ಛಂದಸ್ಸಿನ ಮತ್ತೇಭವಿಕ್ರೀಡಿತ ವೃತ್ತದ ಲಕ್ಷ್ಯವಾಗಿದೆ.

| | | |
|---|---|---|
| 47. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | $1 \times 3 = 3$ |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ನಾಲ್ಕು ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ

*ಅಲಂಕಾರದ ಹೆಸರು* : ಉಪಮಾಲಂಕಾರ

ಲಕ್ಷಣ : ಎರಡು ವಸ್ತು ಅಥವಾ ಸನ್ನಿವೇಶಗಳಿಗೆ ಪರಸ್ಪರ ಹೋಲಿಕೆಯನ್ನು ಮಾಡಿ ವರ್ಣಿಸಿದ್ದರೆ ಅದು ಉಪಮಾಲಂಕಾರ ಎನಿಸುತ್ತದೆ.



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಸಮನ್ವಯ* : ಉಪಮಾನ : ಅಮೃತದೊಳು ವಿಷ ಬೆರೆಯುವುದು<br>ಉಪಮೇಯ : ಸತಿಪತಿಗಳೊಂದಾಗದವನ ಭಕ್ತಿ<br>ಉಪಮಾವಾಚಕ : ಅಂತೆ<br>ಸಾಧಾರಣ ಧರ್ಮ ಲುಪ್ತವಾಗಿದೆ.<br>ಇಲ್ಲಿ ಸತಿಪತಿಗಳೊಂದಾಗದವನ ಭಕ್ತಿಯನ್ನು ಅಮೃತದೊಳು ವಿಷ ಬೆರೆತಿರುವುದಕ್ಕೆ ಅಂತೆ ಎಂಬ ವಾಚಕದ ಮೂಲಕ ಹೋಲಿಸಿ ಲುಪ್ತವಾದ 'ಅಪ್ರಯೋಜಕ' ಎಂಬ ಸಾಧಾರಣ ಧರ್ಮವನ್ನು ಹೇಳಿರುವುದರಿಂದ ಇದು ಧರ್ಮಲುಪ್ತ ಉಪಮಾಲಂಕಾರದ ಲಕ್ಷ್ಯವಾಗಿದೆ.<br>**ಅಥವಾ**<br>ನುಡಿದರೆ ಮುತ್ತಿನ ಹಾರದಂತಿರಬೇಕು<br>*ಅಲಂಕಾರದ ಹೆಸರು* : ಉಪಮಾಲಂಕಾರ<br>*ಲಕ್ಷಣ* : ಉಪಮಾನೋಪಮೇಯಗಳಿಗೆ ಪರಸ್ಪರ ಹೋಲಿಕೆಯನ್ನು ಮಾಡಿ ವರ್ಣಿಸಿದ್ದರೆ ಅದನ್ನು ಉಪಮಾಲಂಕಾರ ಎನ್ನುವರು.<br>ಸಮನ್ವಯ :<br>*ಉಪಮೇಯ* : ನುಡಿ<br>*ಉಪಮಾನ* : ಮುತ್ತಿನಹಾರ<br>*ಉಪಮಾ ವಾಚಕ* : ಅಂತೆ<br>*ಸಾಧಾರಣ ಧರ್ಮ* : ಇರಬೇಕು<br>ಇಲ್ಲಿ ಉಪಮೇಯವಾದ ನುಡಿಯನ್ನು ಉಪಮಾನವಾದ ಮುತ್ತಿನಹಾರಕ್ಕೆ ಅಂತೆ ಎಂಬ ಉಪಮಾವಾಚಕದ ಮೂಲಕ ಹೋಲಿಸಿ, ಇರಬೇಕು ಎಂಬ ಸಾಧಾರಣ ಧರ್ಮವನ್ನು ಹೇಳಿರುವುದರಿಂದ ಇದು ಪೂರ್ಣ ಉಪಮಾಲಂಕಾರದ ಲಕ್ಷ್ಯವಾಗಿದೆ.<br>**ವಿಭಾಗ – 'ಸಿ'**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 48. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | $1 \times 3 = 3$ |
| | ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |



https://www.karnatakaboard.com/

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 49. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ವ್ಯಾವಹಾರಿಕ / ಮನವಿ ಪತ್ರ : | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು–ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಂಧ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | ಖಾಸಗಿ / ಗೆಳೆಯನಿಗೆ ಪತ್ರ : | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 50. | **ಪ್ರಬಂಧ ಬರೆವಣಿಗೆ :** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |



https://www.karnatakaboard.com/